**ಕೊಳ್ಳೇಗಾಲದಿಂದ–ತಮಿಳುನಾಡಿಗೆ ಬಸ್ ಸಂಪರ್ಕ**

**3882(4530); ಶ್ರೀ ನರೇಂದ್ರ ಆರ್. (ಹನೂರು)**

ಅ) ಕೊಳ್ಳೇಗಾಲದಿಂದ ಗರಿಕೆಕಂಡಿ–ರಾಮಾಪುರ ಮಾರ್ಗವಾಗಿ ತಮಿಳುನಾಡಿಗೆ ಸಂಚರಿಸುತ್ತಿದ್ದ ನಿಗಮದ ಬಸ್‌ಗಳನ್ನು (ಕೆ.ಎಸ್.ಆರ್.ಟಿ.ಸಿ.) ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪುನಃ ಈ ಮಾರ್ಗವಾಗಿ ಬಸ್‌ಗಳ ಸಂಚಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಪೂರ್ಣ ವಿವರ ಒದಗಿಸುವುದು)?

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)**

ಅ) ಕೊಳ್ಳೇಗಾಲದಿಂದ ಗರಿಕೆಕಂಡಿ–ರಾಮಾಪುರ ಮಾರ್ಗವಾಗಿ ತಮಿಳುನಾಡಿಗೆ ಸುಮಾರು 20 ವರ್ಷಗಳ ಹಿಂದೆ ಕ.ರಾ.ರ.ಸಾ.ನಿಗಮದ ವತಿಯಿಂದ ತಾತ್ಕಾಲಿಕ ಪರವಾನಗಿಯಡಿ ಪ್ರಾಯೋಗಿಕವಾಗಿ ಸಾರಿಗೆ ಕಾರ್ಯಾಚರಣೆ ಮಾಡಲಾಗಿತ್ತು. ತದನಂತರ ಈ ಸಾರಿಗೆ ಕಾರ್ಯಾಚರಣೆಯಾಗಿರುವುದಿಲ್ಲ.

ಆ) ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಸರ್ಕಾರಗಳು ಮಾಡಿಕೊಳ್ಳುವ ಮುಂದಿನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದದ ಸಮಯದಲ್ಲಿ ಪ್ರಸ್ತಾಪಿತ ಮಾರ್ಗವನ್ನು ಸೇರಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.